**SC No. 282/2023**
**PW-1**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 282/2023**

| | | |
|---|---|---|
| ಸಾಕ್ಷಿದಾರರ ಹೆಸರು | ಮಹದೇವನಾಯಕ | ಪ್ರಮಾಣ ವಚನ ಮಾಡಿದ ದಿನಾಂಕ: 17.03.2026 |
| ತಂದೆಯ/ಗಂಡನ ಹೆಸರು | ಲೇಟ್ ಅಂಕನಾಯಕ | |
| ವಯಸ್ಸು | 70 ವರ್ಷ | |
| ವೃತ್ತಿ | ಕೂಲಿ ಕೆಲಸ | ಪ್ರಾ.ಸಾಃ 1 |
| ವಾಸ ಸ್ಥಳ | ಹೊಸಕೋಟೆ ಗ್ರಾಮ | ಚಾ.ಸಾಃ 1 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಗೊತ್ತು ಅವನು ನನಗೆ ಮಗನಾಗಬೇಕು. ನನಗೆ ಒಟ್ಟು 3 ಜನ ಮಕ್ಕಳು ಅವರುಗಳೆಂದರೆ ನಾಗರಾಜು, ಮಾದೇಶ@ ಮಹೇಶ ಮತ್ತು ಸುಂದ್ರಮ್ಮ. ಆರೋಪಿತನಿಗೆ ಮದುವೆಯಾಗಿರುತ್ತದೆ ಮಕ್ಕಳು ಇರುತ್ತಾರೆ. ನಾನು ಆರೋಪಿತನಿಗೆ ಮನೆಯನ್ನು ಬಿಟ್ಟುಕೊಟ್ಟು ಬೇರೆ ವಾಸವಾಗಿರುತ್ತೇನೆ. ಆರೋಪಿತನು ಜಮೀನಿನ ವಿಚಾರದಲ್ಲಿ ಗಲಾಟೆ ಮತ್ತು ಜಗಳ ಮಾಡಿರುವುದಿಲ್ಲ. ಅರೊಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಮಚ್ಚಿನಿಂದ ಸಾಯಿಸುತ್ತೇನೆ ಎಂದು ಹೇಳಿ ಬೆನ್ನಿಗೆ ಮತ್ತು ಬಲಗಾಲಿಗೆ ಹೊಡೆದಿರುವುದಿಲ್ಲ ನಾನು ಬಿದ್ದು ಪೆಟ್ಟು ಮಾಡಿಕೊಂಡಿದ್ದು ಚಿಕಿತ್ಸೆ ಪಡೆದುಕೊಂಡಿದ್ದೆ. ನಾನು ಆರೋಪಿತನ ವಿರುದ್ಧವಾಗಿ

ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನಾನು ನನ್ನ ಎಡಗೈ ಹೆಬ್ಬೆಟಿನ ಗುರುತನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದೂರನ್ನು ತೋರಿಸಲಾಯಿತು ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–1** ಎಂದು ಗುರುತಿಸಲಾಯಿತು. ನಿಪಿ–1 ರಲ್ಲಿ ಏನು ಬರೆದುಕೊಂಡಿರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ಕೊಟ್ಟಿರುವುದಿಲ್ಲ. ನಾನು ನ್ಯಾಯಾಧೀಶರ ಮುಂದೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನು ಹೊಸಕೋಟೆ ಗ್ರಾಮದ ಸರ್ವೆ ನಂಬರ್ 308 ರಲ್ಲಿ ಇರುವಂತಹ 16 ಗುಂಟೆ ಜಮೀನನ್ನು ನನ್ನ ಹೆಸರಿಗೆ ಮಾಡಿಕೊಡುವಂತೆ ಆಗಾಗ್ಗೆ ಪೀಡಿಸಿ ತೊಂದರೆ ಉಂಟು ಮಾಡುತ್ತಿದ್ದ ಎಂದರೆ ಸರಿಯಲ್ಲ. ದಿನಾಂಕ 14.03.2023 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನಾನು ನನ್ನ ಮನೆಯ ಮುಂದಿನ ರಸ್ತೆಯಲ್ಲಿ ನಿಂತಿದ್ದಾಗ ಆರೋಪಿತನು ಬಂದು ನನಗೆ ಬೋಳಿ ಮಗನೇ ನಿನ್ನ ಹೆಸರಿನಲ್ಲಿ ಇರುವ ಜಮೀನನ್ನು ಬರೆದುಕೊಡುವೆಯಾ ಇಲ್ಲವೋ ಎಂದು

ಬೈದಿದ್ದ ಎಂದರೆ ಸರಿಯಲ್ಲ. ಅದಕ್ಕೆ ನಾನು ನೀನು ಕುಡಿದು ಏನೇನೋ ಮಾತನಾಡುತ್ತೀಯಾ ಮನೆಗೆ ಹೋಗು ಎಂದು ಹೇಳಿದ್ದಕ್ಕೆ ಆರೋಪಿತನು ತನ್ನ ಸೊಂಟದಲ್ಲಿ ಅಡಗಿಸಿಕೊಂಡಿದ್ದ ಮಚ್ಚನ್ನು ತೆಗೆದು ನೀನು ಸಾಯಿ ಎಂದು ನನ್ನ ಬೆನ್ನಿಗೆ ಬಲಗಾಲಿಗೆ ಜೋರಾಗಿ ಹೊಡೆದು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದ ಎಂದರೆ ಸರಿಯಲ್ಲ. ನನಗೆ ತೀವ್ರವಾಗಿ ಗಾಯವಾಗಿದ್ದರಿಂದ ನಾನು ಕೆ.ಆರ್. ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಈಗ ನನಗೆ ತೋರಿಸಿದ ಹೇಳಿಕೆ ಕಾಪಿಯಂತೆ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಪ್ರಕರಣದ ಅನುಕೂಲಕ್ಕೋಸ್ಕರ ಸದರಿ ಹೇಳಿಕೆಯನ್ನು **ನಿಪಿ-2** ಎಂದು ಗುರುತಿಸಲಾಯಿತು. ನನ್ನ ರಕ್ತಮಯವಾದಂತಹ ಬಟ್ಟೆಗಳನ್ನು ಪೊಲೀಸರಿಗೆಪ ಯಾರು ಕೊಟ್ಟಿದ್ದರು ಎಂದು ಗೊತ್ತಿರುವುದಿಲ್ಲ. ನಾನು ಬಟ್ಟೆಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

*( ಸಾಕ್ಷಿದಾರರಿಗೆ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)*

ಸಾಕ್ಷಿದಾರರಿಗೆ ನ್ಯಾಯಾಲಯದ ಮುಂದೆ ಇರುವ ಮರದು ಹಿಡಿ ಇರುವ ಕಬ್ಬಿಣದ ಮಚ್ಚನ್ನು ತೋರಿಸಿ ಈ ಮಚ್ಚನ್ನು ಆರೋಪಿತನು ಕೃತ್ಯಕ್ಕೆ ಬಳಸಿದ್ದ ಮಚ್ಚು ಎಂದರೆ ಸರಿಯಲ್ಲ. ಪ್ರಕರಣದ ತೀರ್ಮಾನದ ಸಲುವಾಗಿ ಸದರಿ ಮಚ್ಚನ್ನು ಎಂ.ಒ-1 ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಒಂದು ಬಿಳಿ ಬಣ್ಣದ ಪಂಚೆ, ಟವಲ್,

ಬನಿಯನ್ ಮತ್ತು ರೆಡಿಮೇಡ್ ಶರ್ಟು ಕೃತ್ಯ ನಡೆದ ಸಂದರ್ಭದಲ್ಲಿ ನಾನು ಧರಿಸಿದ್ದ ಬಟ್ಟೆಗಳು ಎಂದರೆ ಸರಿಯಲ್ಲ. ಪ್ರಕರಣದ ತೀರ್ಮಾನದ ಸಲುವಾಗಿ ಸದರಿ ಅವುಗಳನ್ನು ಎಂ.ಒ–2 ರಿಂದ 5 ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ರಕ್ತಮಿಶ್ರಿತ ಕಾಂಕ್ರೀಟ್ ಮತ್ತು ರಕ್ತ ರಹಿತ ಕಾಂಕ್ರೀಟ್ ಸ್ಥಳ ದಿಂದ ಸಂಗ್ರಹಿಸಿದವುಗಳು ಎಂದರೆ ಸರಿಯಲ್ಲ. ಪ್ರಕರಣದ ತೀರ್ಮಾನದ ಸಲುವಾಗಿ ಸದರಿ ಅವುಗಳನ್ನು ಎಂ.ಒ–6 ಮತ್ತು 7 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಈಗ ಓದಿ ಹೇಳಿದ ನಿಪಿ–3 ರಂತೆ ಪ್ರಕಾರ ಮರು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನ್ನ ಮಗ ಇರುವುದರಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**